ಸರಸ್ವತಿ ಮೋಹನ, ಕೋಟೆ

ತಾಯಿ ಹತ್ತು ಪುತ್ರರನ್ನು ಸಾಕಬಲ್ಲಳು. ಆದರೆ ಹತ್ತು ಪುತ್ರರು ತಾಯಿಯನ್ನು ನೋಡಿಕೊಳ್ಳುವುದಿಲ್ಲವೇಕೆ?



ತಾಯಿಯೆಂಬ ಮರಕ್ಕೆ ಮಕ್ಕಳು ಬಿಳಲುಗಳಾಗದೆ ಹಣ್ಣುಗಳಾಗುವುದರಿಂದ.

ವ. ಉಮೇಶ ಕಾರಂತ, ಮಂಗಳೂರು

ಕಾಗೆಗೆ ಕೋಗಿಲೆಯ ಧ್ವನಿ, ಹಂಸದ ಬಣ್ಣ ಇದ್ದಿದ್ದರೆ?

ಹಂಚಿ ತಿನ್ನುವ ಗುಣ, ಮೆತ್ತನೆಯ ಪುಕ್ಕ ಇರುತ್ತಿರಲಿಲ್ಲ!

ವಿ. ಜಯವಂತ ಪೈ, ಕುಂದಾಪುರ

ಶಸ್ತ್ರಚಿಕಿತ್ಸೆ ಮಾಡುವಾಗ ವೈದ್ಯರು ಮಾಸ್ಕ್ ಧರಿಸುವುದೇಕೆ?

ಚಾಕು ಹಿಡಿದವರು ಮುಖವಾಡ ಧರಿಸುವುದು ಬಹಳ ಹಳೆಯ ರೂಢಿ.

ಗಂಜಾಂ ನಾಗರಾಜ, ಮೈಸೂರು

ಕಂಬಳಿಹುಳ ಸುಂದರ ಚಿಟ್ಟೆ ಆಗುತ್ತದೆಂದು ತಿಳಿದಿದ್ದರೂ ಅದನ್ನು ಕಂಡರೆ ಅಸಹ್ಯ ಪಡುವುದೇಕೆ?



ಪಾರ್ಲರ್ ನಿಯಮ; ಒಳಹೋಗುವ ಕುರೂಪಿಯನ್ನು ಕಂಡರೆ ಸಿಡುಕುತ್ತಾರೆ; ಹೊರಬರುವ ಅಪ್ಸರೆಯನ್ನು ಕಂಡು ಮಿಡುಕುತ್ತಾರೆ.

ನರಸಿಂಹ ಪೈ, ಕಾಸರಕೋಡ

ಜೀವಿ ಚಿರಂಜೀವಿ ಆಗುವುದು ಯಾವಾಗ?

ಚಿಕ್ಕನಹಳ್ಳಿ ರಂಗಯ್ಯನ ಮಗ ಜೀವಿ ಎಂದಾದಾಗ.

ನಾಜ್ಯೋತಿ, ಹೂವಿನಹಡಗಲಿ

ಶ್ರೇಷ್ಠರ ಮೂರ್ತಿಗಳನ್ನು ಊರಮಧ್ಯೆ ಸ್ಥಾಪಿಸಿ ಅವರ ತತ್ವಾದರ್ಶಗಳನ್ನು ಮೂಲೆಗುಂಪಾಗಿಸುವರಿಗೆ ಏನೆನ್ನಬೇಕು?

ರಾಮಮಂದಿರದಲ್ಲಿ ಲೈನ್ ಹೊಡೆಯುವ 'ಭಕ್ತ'ರಿರುವುದಿಲ್ಲವೆ! ಆಚಾರವೇ ಬೇರೆ, ವಿಚಾರವೇ ಬೇರೆ.

ಆರತಿ ಘಟಿಕಾರ್, ಬೆಂಗಳೂರು

ಸದಾ ಹಣದ ಕೊರತೆ ಇದ್ದಂತೆ ನಟಿಸುವವರನ್ನು ಏನೆನ್ನಬೇಕು?

ಔಟ್ ಆಫ್ ಆರ್ಡರ್ ಬೋರ್ಡಿರುವ ಎಟಿಎಂ!

ಫಾಲನೇತ್ರ ಸಜ್ಜನ, ಶಿರಸಿ

ಕದಂಬೋತ್ಸವಕ್ಕೆ ಲಕ್ಷಾಂತರ ಜನ ಸೇರುವ ಬನವಾಸಿಯಲ್ಲಿ ಶೌಚಾಲಯಗಳು ಬಳಕೆಗೆ ಯೋಗ್ಯವಾಗಿರಬೇಕಲ್ಲವೆ?

ಆರಂಕುಶವಿಟ್ಟೊಡಂ ಪಡೆವೆನಾನು ಪಣಂ ಕಡುಶ್ವಪಚ ಮಾರ್ಗದೊಳ್ ಎನ್ನುವರಿರುವವರೆಗೆ ಶೌಚ ಲಯವೇ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ಬೆಳಕಿಗೆ ನೆರಳು ಇರುತ್ತದೆಯೆ?

ಹೂಂ. ಜಗದ ಆ ಕಡೆಯ ಬೆಳಕಿನ ನೆರಳೇ ಈ ಕಡೆಯ ಇರುಳು.

ರಮೇಶ ಜ. ಬೊಂಗಾಳೆ, ಬೈಲಹೊಂಗಲ

ದೇವರ ರಥಕ್ಕೆ ನಾಲ್ಕು ಗಾಲಿಗಳು. ಜೀವನ ರಥಕ್ಕೆ?

ನಾಲ್ಕೇ; ಅಧ್ಯಯನ, ಅವಧಾನ, ಅವಕಾಶ, ಅನುಸರಣೆ.

ಕೆ.ಎಸ್. ಚಂದ್ರಶೇಖರ್, ಮೈಸೂರು

ಅತೃಪ್ತ+ಅನರ್ಹ= ಅಯೋಗ್ಯ. ಇದು ಯಾವ ಸಂಧಿ? ಯಾವ ಸಮಾಸ?

ಕಾಂಚಾಣ ದೀರ್ಘ ಸಂಧಿ ಅರಿಸಮಾ(ಮೋ)ಸ.

ಶ್ರುತಿ ರಿಗ್ರೆಟ್ ಐಯ್ಯರ್, ಬೆಂಗಳೂರು

ಮುಪ್ಪಾಗುತ್ತಿದ್ದಂತೆ ವೃದ್ಧರು ಶೋಕಿ ಮಾಡಿಕೊಳ್ಳುವುದೇಕೆ?

ಟಿಂಕರಿಂಗ್, ಪೇಂಟಿಂಗ್ ಇಲ್ಲದಿದ್ದರೆ ಸ್ಕ್ರ್ಯಾಪ್ ತರಹ ಕಾಣುವುದರಿಂದ.

ಮೇಟಿ ಕೊಟ್ರಪ್ಪ, ಬಸರಕೋಡು

ಯಕ್ಷಪ್ರಶ್ನೆಗೂ ಉತ್ತರಿಸುವ ನಿಮಗೆ ಯಾವ ಪ್ರಶಸ್ತಿ ಕೊಡಬೇಕು?

ಕೊಟ್ಟಾಗಿದೆಯಲ್ಲ! ಉತ್ತಮ ಪ್ರಶ್ನೆಗಳನ್ನು ಕೇಳುವವರೇ ಉತ್ತರಿಸುವವನಿಗೆ ಅತಿ ದೊಡ್ಡ ಪ್ರಶಸ್ತಿ.

## ಬಹುಮಾನಿತ ಪ್ರಶ್ನೆ

ಸವಿತಾ ರವಿ ಸುಟ್ಟಟ್ಟಿ, ಬನಹಟ್ಟಿ

ವಾರಕ್ಕೆ ಎರಡು ಭಾನುವಾರ ಬಂದರೆ ಹೇಗಿರುತ್ತೆ?

ವಾರದ ರಜಾ ಬೇರೆ ದಿನಕ್ಕೆ ಶಿಫ್ಟ್ ಆಗತ್ತೆ.

ವಿ. ಹಮೀದ್, ವಿಟ್ಲ

ಪುಣ್ಯವಂತೆಯರನ್ನು ಸತಿ ಸಾವಿತ್ರಿ ಎನ್ನುವಂತೆ ಪುಣ್ಯವಂತರನ್ನು ಏನೆನ್ನುತ್ತಾರೆ?

ಅವಿವಾಹಿತರು.

ಜವಳಿ ಜಯ್ಯಣ್ಣ, ದಾವಣಗೆರೆ

ಕದ್ದು ನೋಡುವುದಕ್ಕೂ, ಕದ್ದು ಕೇಳುವುದಕ್ಕೂ ಏನು ವ್ಯತ್ಯಾಸ ರಾಮ್‌ಜಿ?

ಒಂದು ಪ್ರಣಯಕ್ಕೆ ಮೂಲ; ಇನ್ನೊಂದು ವಿಲಯಕ್ಕೆ ಮೂಲ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

ಸಾವಿರಾರು ಕೋಟಿ ಇದ್ದರೂ ಖರೀದಿಸಲಾಗದ ವಸ್ತು ಯಾವುದು ರಾಂ?



ಹರಿದಿರುವ ಓಝೋನ್ ಪರದೆಗೊಂದು ಮುಚ್ಚಳ.

ಟಿ.ಎಂ. ಮಾನಪ್ಪ, ಶಿವಮೊಗ್ಗ

ನಗುವಿಗೂ, ಹಾಸ್ಯಕ್ಕೂ ಏನು ವ್ಯತ್ಯಾಸ?

ಹಾಸ್ಯ ದೇಣಿಗೆ, ನಗು ರಸೀತಿ.

ಕೆ.ಎಚ್. ರಾಮಕೃಷ್ಣಾರೆಡ್ಡಿ, ಬೆಂಗಳೂರು

ದೇವರ ಮಗ ಎಷ್ಟು ಸುಂದರವಾಗಿರುತ್ತಾನೆ?

ಪ್ರಶ್ನೆ ಸ್ಪಷ್ಟವಾಗಿಲ್ಲ. ಕೃಷ್ಣನ ಮಗನೋ, ಮರುತನ ಮಗನೋ?

ಪಿ.ಎನ್. ಶ್ರೀವತ್ಸ, ಬೆಂಗಳೂರು

ಮೃತ್ಯುವಿಗಿಂತ ಭಯ ಇದೆಯೆ?

ಇದೆ. ಸತ್ತವನು ವಿಲ್‌ನಲ್ಲಿ ಏನು ಹಾಳು ಬರೆದುಬಿಟ್ಟಿರುತ್ತಾನೋ ಎಂಬ ಭಯ.

■ ರಾಮ್